# ಡೇಟಿಂಗ್ ಕ್ರಶ್‌ಗೆ ಫೇಸ್‌ಬುಕ್ ಪುಶ್

■ ಶಶಿಕುಮಾರ್ ಸಿ.




'ಫೇಸ್‌ಬುಕ್‌ನಲ್ಲಿ ಕಂಡ ಅವಳ/ಅವನ ಮೇಲೆ ಕ್ರಶ್ (ಮನಸ್ಸಾಗಿದೆ) ಆಗಿದೆ. ಬಾಳಸಂಗಾತಿಯಾಗಿ ಅವರನ್ನು ಆಯ್ಕೆ ಮಾಡಿಕೊಳ್ಳುವ ಇರಾದೆ. ಆದರೆ, ತನ್ನ ಮನದಿಚ್ಛೆ ವ್ಯಕ್ತಪಡಿಸಲು ಯಾಕೋ ಹಿಂಜರಿಕೆ. ತಿರಸ್ಕರಿಸಿದರೆ, ಅದು ಎಲ್ಲರಿಗೂ ಗೊತ್ತಾದರೆ ಅನ್ನೋ ಭಯ, ಆತಂಕ.' ಇಂಥ ತೊಳಲಾಟದಲ್ಲಿ ಬಿದ್ದು ಒದ್ದಾಡುತ್ತಿರುವ ಅದೆಷ್ಟೋ ಸಾಮಾಜಿಕ ಬಳಕೆದಾರರನ್ನು 'ಪುಶ್' ಮಾಡಲೆಂದೇ ಫೇಸ್‌ಬುಕ್, 'ಫೇಸ್‌ಬುಕ್ ಡೇಟಿಂಗ್ ಪ್ರೊಫೈಲ್' ಎಂಬ ಹೊಸ ಫೀಚರ್ ಪರಿಚಯಿಸಿದೆ.

ಈ ಫೀಚರ್‌ನಿಂದ ಬಳಕೆದಾರರು ತಮ್ಮ ಸೀಕ್ರೆಟ್ ಕ್ರಶ್ ಅನ್ನು ನಿವೇದನೆ ಮಾಡಿಕೊಳ್ಳಬಹುದು. ನಿಮ್ಮ ಮೇಲೆ ಯಾರಿಗಾದರೂ ಕ್ರಶ್ ಆಗಿದ್ದರೂ ಆ ಬಗ್ಗೆ ತಿಳಿಯಬಹುದು. ಸಂಗಾತಿಯ ಹುಡುಕಾಟದಲ್ಲಿ ಇರುವವರಿಗೆ ಫೇಸ್‌ಬುಕ್‌ನ ಈ ಹೊಸ ನಡೆ ಅನುಕೂಲಕ್ಕೆ ಬರುತ್ತದೆ. ಡೇಟಿಂಗ್ ಮಾಡಬಯಸುವವರಿಗೂ ಅನುಕೂಲ.

ಈ ಸೌಲಭ್ಯ ಪಡೆಯಲು ಫೇಸ್‌ಬುಕ್‌ನ ಅಪ್‌ಡೇಟೆಡ್ ವರ್ಷನ್ ಅನ್ನು ಬಳಸುತ್ತಿರಬೇಕು. ಬಳಕೆದಾರರು 18 ವರ್ಷಕ್ಕಿಂತ ಮೇಲ್ಪಟ್ಟವರಾಗಿರಬೇಕು. ಪ್ರತ್ಯೇಕ 'ಫೇಸ್‌ಬುಕ್ ಡೇಟಿಂಗ್ ಪ್ರೊಫೈಲ್' ಸೃಷ್ಟಿಸಿ, ಅದರಲ್ಲಿ ಫೇಸ್‌ಬುಕ್ ಡೇಟಿಂಗ್ ಆಯ್ಕೆಯನ್ನು ಎನೇಬಲ್ ಮಾಡಬೇಕು. ಆ ಪ್ರೊಫೈಲ್‌ಗೆ ಲಾಗಿನ್ ಆದರೆ ಆದ್ಯತೆ, ಆಸಕ್ತಿಗಳ ಮೇರೆಗೆ ಅದೇ ಮನಸ್ಥಿತಿವುಳ್ಳವರ ಪ್ರೊಫೈಲ್‌ಗಳು ಕಾಣಿಸಿಕೊಳ್ಳುತ್ತವೆ.



ಹಾಗೆ ಕಾಣುವ ಪ್ರೊಫೈಲ್‌ಗಳ ಬಳಕೆದಾರರ ಮೇಲೆ ಕ್ರಶ್ ಆದರೆ ಅಥವಾ ಅವರ ಬಗ್ಗೆ ತಿಳಿದುಕೊಳ್ಳುವ ಆಸಕ್ತಿಯಿದ್ದರೆ ಅವರ ಪ್ರೊಫೈಲ್‌ಗೆ ಕಾಮೆಂಟ್ ಮಾಡಬಹುದು. ಲೈಕ್ ಬಟನ್ ಒತ್ತಿ ಮನದಿಚ್ಛೆಯನ್ನು ತಿಳಿಸಬಹುದು. ನಿಮ್ಮ ಮನದಿಚ್ಛೆ ಒಪ್ಪಿಗೆಯಾದರೆ ಪ್ರತಿಕ್ರಿಯೆಯೂ ಸಿಗಬಹುದು. ಆದರೆ, ವಿಡಿಯೊ, ಫೋಟೊ ಕಳುಹಿಸಲು ಸಾಧ್ಯವಿಲ್ಲ.

ಜೋಡಿ ಹುಡುಕಲು 'ಫೇಸ್‌ಬುಕ್ ಡೇಟಿಂಗ್' ಸ್ನೇಹಿತರ ಸ್ನೇಹಿತರನ್ನು ಮತ್ತು ನಿಮ್ಮ ವೈಯಕ್ತಿಕ ಸರ್ಕಲ್‌ನಲ್ಲಿ ಇಲ್ಲದವರನ್ನು ಸಂಪರ್ಕಿಸುವಂತೆ ಮಾಡುತ್ತದೆ. ಡೇಟಿಂಗ್ ಸಂಬಂಧಿತ ನಿಮ್ಮ ಎಲ್ಲ ಕಾರ್ಯಗಳು ಕೇವಲ 'ಫೇಸ್‌ಬುಕ್ ಡೇಟಿಂಗ್'ಗೆ ಮಾತ್ರ ಸೀಮಿತವಾಗಿರುತ್ತವೆ. ಅದರ ಮಾಹಿತಿಯೂ ಫೇಸ್‌ಬುಕ್ ಖಾತೆಯೊಂದಿಗೆ ಲಿಂಕ್ ಆಗುವುದಿಲ್ಲ.

'ಫೇಸ್‌ಬುಕ್ ಡೇಟಿಂಗ್' ಬಳಕೆದಾರರು ಶೀಘ್ರವೇ ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂ ಸ್ಟೋರಿಸ್‌ನಲ್ಲೂ ತಮ್ಮ ಡೇಟಿಂಗ್ ವಿಚಾರಗಳನ್ನು ಹಂಚಿಕೊಳ್ಳಬಹುದು. ಜನರು ತಮಗೆ ಏನು ಸರಿಹೊಂದುತ್ತದೆ / ಸರಿ ಹೊಂದುವುದಿಲ್ಲ ಎನ್ನುವುದನ್ನು ತಿಳಿಯಲು ಸಾಮಾಜಿಕ ಜಾಲತಾಣಗಳ ಮೊರೆಹೋಗುತ್ತಿದ್ದಾರೆ. ಅಂಥವರ ಅನುಕೂಲಕ್ಕೆಂದೇ ಡೇಟಿಂಗ್ ವಿಚಾರವನ್ನು ಹಂಚಿಕೊಳ್ಳಲು, ನಿಮ್ಮ ಮತ್ತು ನಿಮ್ಮ ಕ್ರಶ್ ಬಗ್ಗೆ ವ್ಯಕ್ತಪಡಿಸಲು ಡೇಟಿಂಗ್‌ನಲ್ಲೂ ಸ್ಟೋರಿಸ್ ಆಯ್ಕೆಯನ್ನು ಕಲ್ಪಿಸಲಿದೆ ಫೇಸ್‌ಬುಕ್.

ಸೀಕ್ರೆಟ್ ಕ್ರಶ್ ಎನ್ನುವುದು 'ಫೇಸ್‌ಬುಕ್ ಡೇಟಿಂಗ್ ಪ್ರೊಫೈಲ್'ನ ಉಪ ಫೀಚರ್. ಬಳಕೆದಾರರು ತಮ್ಮ ಸರ್ಕಲ್‌ನಲ್ಲಿಯೇ/ ಸ್ನೇಹಿತರ ಮೇಲೆಯ ಕ್ರಶ್ ಆಗಿದ್ದರೆ, ಅಂಥವರು ಈ ಸೀಕ್ರೆಟ್ ಕ್ರಶ್ ಬಳಸಬಹುದು. ಇದನ್ನು ಬಳಸಲು ಇಚ್ಛಿಸುವವರು ಕೇವಲ ಒಂಬತ್ತು ಮಂದಿಯನ್ನಷ್ಟೇ ತಮ್ಮ ಸೀಕ್ರೆಟ್ ಕ್ರಶ್ ಪಟ್ಟಿಗೆ ಸೇರಿಸಲು ಸಾಧ್ಯ. ಇನ್‌ಸ್ಟಾಗ್ರಾಂನ ಫಾಲೋವರ್ಸ್ ಅನ್ನೂ ಈ ಪಟ್ಟಿಗೆ ಸೇರಿಸಬಹುದು. ಅದಕ್ಕಾಗಿ ಅವೆರಡರ ಖಾತೆಗಳನ್ನು ಫೇಸ್‌ಬುಕ್ ಡೇಟಿಂಗ್‌ನೊಂದಿಗೆ ಲಿಂಕ್ ಮಾಡಬೇಕು.




'ಫೇಸ್‌ಬುಕ್ ಡೇಟಿಂಗ್'ನಲ್ಲಿ ಸಂಗಾತಿ ಆಯ್ಕೆ ಮಾಡಿದ ಕೂಡಲೇ ಅವರಿಗೆ 'ಅಪರಿಚಿತ ವ್ಯಕ್ತಿಗೆ ನಿಮ್ಮ ಮೇಲೆ ಕ್ರಶ್ ಆಗಿದೆ' ಎಂಬರ್ಥದ ಸಂದೇಶ ನೋಟಿಫಿಕೇಷನ್ ರೂಪದಲ್ಲಿ ರವಾನೆಯಾಗುತ್ತದೆ. ಅವರು ತಮ್ಮ ಸೀಕ್ರೆಟ್ ಕ್ರಶ್ ಪಟ್ಟಿಗೆ ನಿಮ್ಮನ್ನು ಆಯ್ಕೆ ಮಾಡಿದರೆ ನಿಮ್ಮ ನಡುವೆ ಪರಸ್ಪರ ಸಂವಹನ ಏರ್ಪಡಲು ಗ್ರೀನ್ ಸಿಗ್ನಲ್ ಸಿಕ್ಕಂತೆ. 'ಮ್ಯಾಚ್ ಆಗಿದೆ' ಎಂಬ ಸಂದೇಶವೂ ನಿಮಗೂ ಸಿಗುತ್ತದೆ. ಒಂದು ವೇಳೆ ನೀವು ಆಯ್ಕೆ ಮಾಡಿದ ಸಂಗಾತಿ ಫೇಸ್‌ಬುಕ್ ಡೇಟಿಂಗ್‌ನಲ್ಲಿ ಇಲ್ಲವಾದರೆ, ಸೀಕ್ರೆಟ್ ಕ್ರಶ್ ಲಿಸ್ಟ್ ಮಾಡಿಲ್ಲವಾದರೆ ಅಥವಾ ತಮ್ಮ ಸೀಕ್ರೆಟ್ ಪಟ್ಟಿಗೆ ನಿಮ್ಮ ಹೆಸರನ್ನು ಸೇರಿಸದಿದ್ದರೆ ಅವರಿಗೆ ನಿಮ್ಮ ಬಗ್ಗೆ ಆಸಕ್ತಿ ಇಲ್ಲದಂತೆ. ಜೊತೆಗೆ ನಿಮಗಾದ ಅವರ ಮೇಲಿನ ಕ್ರಶ್ ಬಗ್ಗೆ ಯಾರಿಗೂ ಗೊತ್ತಾಗದಂತೆ ಫೇಸ್‌ಬುಕ್ ಡೇಟಿಂಗ್ ಪ್ರೊಫೈಲ್ ಗೋಪ್ಯತೆ ಕಾಪಾಡಿಕೊಳ್ಳುತ್ತದೆ. ನಿಮ್ಮೆಲ್ಲ ಡೇಟಿಂಗ್ ಚಟುವಟಿಕೆಗಳು 'ಫೇಸ್‌ಬುಕ್ ಡೇಟಿಂಗ್'ನಲ್ಲೇ ಉಳಿಯುತ್ತವೆ. ಇದರಲ್ಲಿ ಖಾಸಗಿತನಕ್ಕೆ, ಸುರಕ್ಷತೆಗೆ ಒತ್ತು ನೀಡಲಾಗಿದೆ.

'ಅಮೆರಿಕ ಸೇರಿದಂತೆ 19 ದೇಶಗಳಲ್ಲಿ ಫೇಸ್‌ಬುಕ್ ಡೇಟಿಂಗ್ ಪರಿಚಯಿಸಲಾಗಿದ್ದು, ಭಾರತಕ್ಕಿನ್ನೂ ಇದು ಕಾಲಿಟ್ಟಿಲ್ಲ. ಈ ವರ್ಷಾಂತ್ಯದೊಳಗೆ, ನಿಮ್ಮ ಡೇಟಿಂಗ್ ಪ್ರೊಫೈಲ್‌ಗೆ ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಂ ಸ್ಟೋರಿಗಳನ್ನು ಸೇರಿಸಲು ಸಾಧ್ಯವಾಗಿಸುತ್ತೇವೆ' ಎಂದು ಫೇಸ್‌ಬುಕ್ ಡೇಟಿಂಗ್ ಫೀಚರ್‌ನ ಪ್ರಾಡಕ್ಟ್ ವ್ಯವಸ್ಥಾಪಕ ನಥಾನ್ ಶಾರ್ಪ್ ಫೇಸ್‌ಬುಕ್‌ನ ಬ್ಲಾಗ್‌ನಲ್ಲಿ ಬರೆದುಕೊಂಡಿದ್ದಾರೆ. ■